ಕರ್ನಾಟಕ ಸರ್ಕಾರ
ಸಾರ್ವಜನಿಕ ಶಿಕ್ಷಣ ಇಲಾಖೆ
ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು-01

ಸಂಖ್ಯೆ ಸಿ3(4) ಪ್ರಾ.ಶಿ.ಉ.ವ್ಯಾ/ ಆರ್‌ಐಇ/2016-17 ದಿನಾಂಕ: 27.05.2016.

ಸುತ್ತೋಲೆ

*********

ವಿಷಯ: ಸರ್ಕಾರಿ ಪ್ರಾಥಮಿಕ ಶಾಲಾ ಶಿಕ್ಷಕರಿಗೆ 2016-17 ನೇ ಸಾಲಿಗೆ ಒಂದು ವರ್ಷದ ಡಿಪ್ಲೋಮಾ ಇನ್ ಕಮ್ಯುನಿಕೇಷನ್ ಕೋರ್ಸ್ ಇನ್ ಇಂಗ್ಲೀಷ್- ಡಿಸ್ಟೆನ್ಸ್ ಮೋಡ್ ವ್ಯಾಸಂಗಕ್ಕೆ ಅನುಮತಿ ನೀಡುವ ಬಗ್ಗೆ.

ಉಲ್ಲೇಖ: Director, Regional Institute of English, South India, Bangalore ಇವರ ಪತ್ರ ಸಂಖ್ಯೆ RIE/DIEC/CRS-4/DEPT/2016-17/02 .ದಿನಾಂಕ. 01.04.2016

***********

ಸರ್ಕಾರಿ ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಒಂದು ವರ್ಷದ ಡಿಪ್ಲೋಮಾ ಇನ್ ಕಮ್ಯುನಿಕೇಷನ್ ಕೋರ್ಸ್ ಇನ್ ಇಂಗ್ಲೀಷ್-ಡಿಸ್ಟೆನ್ಸ್ ಮೋಡ್ ವ್ಯಾಸಂಗ ಮಾಡಲು ಶಿಕ್ಷಕರನ್ನು ಕಳುಹಿಸಿಕೊಡುವ ಬಗ್ಗೆ ನಿರ್ದೇಶಕರು, ಆರ್.ಐ.ಇ ಇವರು ಉಲ್ಲೇಖಿತ ಪತ್ರದಲ್ಲಿ ತಿಳಿಸಿರುತ್ತಾರೆ. ಆರ್.ಐ.ಇ ರವರು ಒದಗಿಸಿರುವಂತೆ, ವ್ಯಾಸಂಗದ ವಿವರಗಳನ್ನು ಈ ಪತ್ರದೊಂದಿಗೆ ಲಗತ್ತಿಸಿದೆ.

**2016-17 ನೇ ಸಾಲಿಗೆ** ಒಂದು ವರ್ಷದ ಡಿಪ್ಲೋಮಾ ಇನ್ ಕಮ್ಯುನಿಕೇಷನ್ ಕೋರ್ಸ್ ಇನ್ ಇಂಗ್ಲೀಷ್- ಡಿಸ್ಟೆನ್ಸ್ ಮೋಡ್ ವ್ಯಾಸಂಗ ಮಾಡಲು **48 ವರ್ಷ ವಯೋಮಿತಿ ಮೀರದ** ಆಸಕ್ತ ಶಿಕ್ಷಕರಿಂದ ಅರ್ಜಿ ಸಲ್ಲಿಸಲು ತಿಳಿಸಿದೆ. **ಕೋರ್ಸ್‌ನ್ನು ಯಶಸ್ವಿಯಾಗಿ ಪೂರೈಸುವ ಷರತ್ತಿಗೊಳಪಟ್ಟು ಕೋರ್ಸ್ ಫೀ ರೂ.2500/- ನ್ನು ಇಲಾಖೆಯು ಭರಿಸುತ್ತದೆ.**

ಕ್ಷೇತ್ರ ಶಿಕ್ಷಣಾಧಿಕಾರಿಗಳು ಆಸಕ್ತ ಶಿಕ್ಷಕರಿಂದ ಅರ್ಜಿಗಳನ್ನು ಪಡೆದು ***ದಿನಾಂಕ 10-06-2016*** ರ *ಒಳಗೆ* ಉಪನಿರ್ದೇಶಕರಿಗೆ ಸಲ್ಲಿಸತಕ್ಕದ್ದು. ಕ್ಷೇತ್ರ ಶಿಕ್ಷಣಾಧಿಕಾರಿಗಳಿಂದ ಸ್ವೀಕರಿಸಿದ ಅರ್ಜಿಗಳನ್ನು ಕ್ರೋಢೀಕರಿಸಿ ಶಿಕ್ಷಕರ ಹೆಸರುಗಳನ್ನು ಪಟ್ಟಿಮಾಡಿ ಉಪನಿರ್ದೇಶಕರುಗಳು ಈ ಕಾರ್ಯಾಲಯಕ್ಕೆ ದಿನಾಂಕ **20-06-2016** ರ ಒಳಗೆ ಸಲ್ಲಿಸಲು ತಿಳಿಸಿದೆ.

**ಸರ್ಕಾರಿ ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಇಂಗ್ಲೀಷ್ ಭಾಷೆಯ ಗುಣಮಟ್ಟವನ್ನು ಹೆಚ್ಚಿಸುವ ಸಲುವಾಗಿ ಮಾತ್ರ ಒಂದು ವರ್ಷದ ಡಿಪ್ಲೋಮಾ ಇನ್ ಕಮ್ಯುನಿಕೇಷನ್ ಕೋರ್ಸ್ ಇನ್ ಇಂಗ್ಲೀಷ್- ಡಿಸ್ಟೆನ್ಸ್‌ಮೋಡ್** (ಬಾಹ್ಯ ವ್ಯಾಸಂಗ) ಮಾಡಲು Regional Institute of English, South India, jnanabharathi Campus, Bangalore-56 ಇಲ್ಲಿ **ದೂರ ಶಿಕ್ಷಣ ವ್ಯಾಸಂಗಕ್ಕೆ** ದಾಖಲಾಗಲು ಅನುಮತಿ ನೀಡಲಾಗುವುದು. ಹಾಗೂ **ಡಿಪ್ಲೋಮಾ ಇನ್ ಕಮ್ಯುನಕೇಷನ್ ಕೋರ್ಸ ಇನ್ ಇಂಗ್ಲೀಷ್- ಡಿಸ್ಟೆನ್ಸ್‌ಮೋಡ್**(ಬಾಹ್ಯವ್ಯಾಸಂಗ) **"ಈ ಕೋರ್ಸ್‌ನ್ನು ಬಡ್ತಿ, ಮುಂಬಡ್ತಿ ಉದ್ದೇಶಕ್ಕಾಗಿ ಪರಿಗಣಿಸಲಾಗುವುದಿಲ್ಲ." ದೈಹಿಕ ಶಿಕ್ಷಣ, ಹಾಗೂ ವಿಶೇಷ ಶಿಕ್ಷಕರಿಗೆ ಅವಕಾಶವಿರುವುದಿಲ್ಲ.**

**ಅನುಮತಿ** ನೀಡಲಾಗುವ ಶಿಕ್ಷಕರು ಮೇಲ್ಕಂಡ ಷರತ್ತನ್ನು ಪೂರೈಸಿದಲ್ಲಿ ಹಾಗೂ ಒಪ್ಪಿಗೆ ಪತ್ರ ನೀಡಿದಲ್ಲಿ ಮಾತ್ರ ಬಾಹ್ಯ ವ್ಯಾಸಂಗ ಮಾಡಲು ಮುಂದಿನ ಕ್ರಮ ಕೈಗೊಳ್ಳಲು ಸಂಬಂಧಿಸಿದ ಉಪನಿರ್ದೇಶಕರಿಗೆ ನಿರ್ದೇಶಿಸಿದೆ. ವ್ಯಾಸಂಗದ ಕೋರ್ಸ್‌ನ ಫೀಸು ರೂ.2,500/-ನ್ನು ಮರುಪಾವತಿ

ಮಾಡಲು ಕ್ಷೇತ್ರ ಶಿಕ್ಷಣಾಧಿಕಾರಿಗಳು ಸಂಬಂಧಿಸಿದ ಶಿಕ್ಷಕರಿಂದ ಮೂಲ ರಶೀದಿಗಳನ್ನು ಪಡೆದು ಉಪನಿರ್ದೇಶಕರಿಗೆ ಸಲ್ಲಿಸುವುದು. **ಉಪನಿರ್ದೇಶಕರು ಮೂಲ ರಶೀದಿಗಳನ್ನು ಕ್ರೋಢೀಕರಿಸಿ. ಮರುಪಾವತಿಗೆ ಬೇಕಾದ ಮೊತ್ತವನ್ನು ನಮೂದಿಸಿ ಒಂದೇ ಸಲ ಈ ಕಛೇರಿಗೆ ಸಲ್ಲಿಸುವುದು.**

[ಮಾನ್ಯ ಆಯುಕ್ತರಿಂದ ಅನುಮೋದಿಸಲ್ಪಟ್ಟಿದೆ]

(ಕೆ. ಆನಂದ)
ನಿರ್ದೇಶಕರು(ಪ್ರಾಥಮಿಕ ಶಿಕ್ಷಣ)

ಇವರಿಗೆ

1. ನಿರ್ದೇಶಕರು, ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ, ನಂ.4, 100 ಫೀಟ್ ರಿಂಗ್ ರೋಡ್, ಬನಶಂಕರಿ 3 ನೇ ಹಂತ ಬೆಂಗಳೂರು-85.
2. ನಿರ್ದೇಶಕರು, ರಿಜೀನಲ್ ಇನ್ಸಿಟಿಟ್ಯೂಟ್ ಆಫ್ ಇಂಗ್ಲೀಷ್ (ಸೌತ್ ಇಂಡಿಯಾ) ಜ್ಞಾನಭಾರತಿ ಆವರಣ, ಬೆಂಗಳೂರು-560056
3. ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ಜಿಲ್ಲೆಗಳ ಉಪನಿರ್ದೇಶಕರುಗಳಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
4. ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ (ಉಪನಿರ್ದೇಶಕರ ಮುಖಾಂತರ)
5. ಕ/ಪ್ರ